(ಇಂದು ದಿನಾಂಕಃ 28–02–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು **6** ನೇ ಪ್ರತಿವಾದಿ ಪರ ಃ ಶ್ರೀ ಎಂ ಟಿ ಹೆಚ್ ವಕೀಲರಿಂದ ಃ **-**

1) ದಾವೆಯನ್ನು ನಾನು ಮತ್ತು ನನ್ನ ಸಹೋದರಿಯಾದ ರತ್ನ ರವರು ಸೇರಿ ಹೂಡಿರುತ್ತೇವೆ. 2 ನೇ ವಾದಿ ರತ್ನ ರವಳಿಗೆ ಮಂಜುಳಾ ಅಂತಾ ಕರೆಯುತ್ತಾರೆ ಎಂದರೆ ಸರಿ. ಹೊನ್ನಪ್ಪ ನನ್ನ ತಾಯಿಯ ತಂದೆಯಾಗಬೇಕು. ಹೊನ್ನಪ್ಪನ ಹೆಂಡತಿ ಪಾರವ್ವ(5 ನೇ ಪ್ರತಿವಾದಿ) ಎಂದರೆ ಸರಿ. ಹೊನ್ನಪ್ಪನು ಮರಣ ಹೊಂದಿರುತ್ತಾನೆ. 5 ನೇ ಪ್ರತಿವಾದಿಯು ದಾವೆ ಚಾಲ್ತಿಯಿದ್ದ ಸಮಯದಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ.

2) ಹೊನ್ನಪ್ಪ ಹಾಗೂ ಪಾರವ್ವ ರವರಿಗೆ 1 ನೇ ಪ್ರತಿವಾದಿ ಸೋಮವ್ವ ಒಬ್ಬಳೇ ಮಗಳು. ಸದರಿಯವರು ನನ್ನ ತಾಯಿ ಎಂದರೆ ಸರಿ. ಸೋಮವ್ವ ರವರನ್ನು ಹೊರತು ಪಡಿಸಿ ಹೊನ್ನಪ್ಪನಿಗೆ ಬೇರೆ ಮಕ್ಕಳು ಇಲ್ಲಾ ಎಂದರೆ ಸರಿ. 2 ನೇ ಪ್ರತಿವಾದಿ ಸೋಮವ್ವನ ಗಂಡನಾಗಿದ್ದು ನನ್ನ ತಂದೆಯಾಗಿರುತ್ತಾರೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗೆ ನನ್ನನ್ನು ಸೇರಿ 4 ಜನ ಮಕ್ಕಳು ಸಿದ್ದಪ್ಪ, ಶಿವಪ್ಪ ಹಾಗೂ ನಾನು ಮತ್ತು 2 ನೇ ವಾದಿ ಎಂದರೆ ಸರಿ.

3) ದಾವಾ ಆಸ್ತಿಯು ಮೂಲತಃ ಹೊನ್ನಪ್ಪ ರವರ ಆಸ್ತಿ ಎಂದರೆ ಸರಿ. ಸದರಿಯವರ ಜೀವಿತ ಅವಧಿಯಲ್ಲಿ ದಾವಾ ಆಸ್ತಿಯನ್ನು ನನ್ನ ತಾಯಿಯಾದ 1 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿ. ಆಸ್ತಿ ಬಿಟ್ಟು ಕೊಟ್ಟ ನಂತರದಲ್ಲಿ 1 ನೇ ಪ್ರತಿವಾದಿಯ ಕಬ್ಜಾ ವಹಿವಾಟಿನಲ್ಲಿಟ್ಟು ಎಂದರೆ ಸರಿ. ಸದರಿ ಆಸ್ತಿಯು ಬಿಟ್ಟು ಕೊಟ್ಟ ಬಗ್ಗೆ ನಿಪಿ-2 ರಂತೆ ಡ ಸಂಖ್ಯೆ ನಮೂದಾಗಿರುತ್ತದೆ ಎಂದರೆ ಸರಿ.

4) ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯಳು ತನ್ನ ಮನೆತನದ ಅಡಚಣೆಗೆಂದು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಆಸ್ತಿಯನ್ನು ಮಾರಾಟ ಮಾಡಿದ್ದು ನಿಜ. ಸಾಕ್ಷಿಯು ಮುಂದುವರೆದು ಆಸ್ತಿಯಲ್ಲಿ ನನ್ನ ಹಕ್ಕು ನನಗೆ ಬೇಕು ಎಂದು ನುಡಿಯುತ್ತಾರೆ.

5) 1 ನೇ ಪ್ರತಿವಾದಿಯು ದಾವಾ ಆಸ್ತಿಯ ಸಂಬಂದ ಖರೀದಿ ಸಂಚಕಾರ ಪತ್ರದ ಮೂಲಕ 6 ನೇ ಪ್ರತಿವಾದಿಗೆ ದಿನಾಂಕ 29-06-2011 ರಂದು ದಾವಾ ಆಸ್ತಿಯನ್ನು 3 ಲಕ್ಷ 50 ಸಾವಿರ ರೂಪಯಿಕ್ಕೆ ಮಾರಾಟ ಮಾಡುತ್ತೇನೆಂದು ಒಪ್ಪಿಕೊಂಡು 3 ಲಕ್ಷ ರೂಪಾಯಿ ಸಂಚಕಾರ ಹಣವನ್ನು ಪಡೆದುಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ವ್ಯವಹಾರವು ಸುಳ್ಳು ವ್ಯವಹಾರ ಆಗಿರುತ್ತದೆ ಮೋಸದಿಂದ ಮಾಡಿದ ಸಹಿ ಆಗಿರುತ್ತದೆ ಎಂದು

ನುಡಿಯುತ್ತಾರೆ. ಮೋಸದಿಂದ ಆಗಿರುತ್ತದೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

6) ಸದರಿ ಸಂಚಕಾರ ಪತ್ರದ ಆದಾರದ ಮೇಲೆ 6 ನೇ ಪ್ರತಿವಾದಿಯು ಮಾನ್ಯ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 314/2012 ನ್ನು ಹೂಡಿ ಆದೇಶವನ್ನು ಪಡೆದುಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ಸಂಚಕಾರ ಹಣವನ್ನು ಮರುಪಾವತಿಸಬೇಕೆಂದು ಆದೇಶ ಮಾಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶದ ವಿರುದ್ಧ 6 ನೇ ಪ್ರತಿವಾದಿಯು ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯ, ನವಲಗುಂದ ರವರಲ್ಲಿ ಆರ್.ಎ.ಸಂಖ್ಯೆ-24/2018 ನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನನ್ನ ತಾಯಿಯವರು ಖರೀದಿ ಸಂಚಕಾರ ಪತ್ರವನ್ನು ಮಾನ್ಯ ಮಾಡಿ ಖರೀದಿ ಪತ್ರವನ್ನು ಮಾಡಿ ಕೊಡಲು ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

7) ಸದರಿ ಪ್ರಕರಣಗಳು ಚಾಲ್ತಿಯಲ್ಲಿರುವ ಸಮಯದಲ್ಲಿ 2 ನೇ ವಾದಿಯು ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು, ಧಾರವಾಡ ಸಿಟ್ಟಿಂಗ್ ಆ್ಯಟ ನವಲಗುಂದ ರವರಲ್ಲಿ ಅಸಲು ದಾವಾ ಸಂಖ್ಯೆ 550/2014 ನ್ನು ನನ್ನ ಮತ್ತು ಈ ಪ್ರಕರಣದ ಪ್ರತಿವಾದಿಯರ ವಿರುದ್ಧ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನನ್ನನ್ನು ವಿರುದ್ಧ ಪಕ್ಷಗಾರರಾಗಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಪ್ರತಿವಾದಿಯರಾದ ನಾವು ಶ್ರೀ.ವಿ.ಡಿ.ಎಲಿಗಾರ ವಕೀಲರ ಮೂಲಕ ಹಾಜರಾಗಿರುತ್ತೇವೆ ಎಂದರೆ ಸರಿ. ಹಾಗೇ ನನ್ನ ತಂದೆಯವರ ಪರವಾಗಿ ಶ್ರೀ.ಎಂ.ಎಸ್.ಹೆಬ್ಬಳ್ಳಿ ವಕೀಲರು ಹಾಜರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಪ್ರಸ್ತುತ ದಾವೆಯ 6 ನೇ ಪ್ರತಿವಾದಿಯು ಸಹ ಪಕ್ಷಗಾರನಾಗಿರುತ್ತಾನೆ ಎಂದರೆ ಸರಿ. ಸದರಿ 6 ನೇ ಪ್ರತಿವಾದಿಯು ಆ ಪ್ರಕರಣದಲ್ಲಿ ತನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾನೆ ಎಂದರ ನನಗೆ ಗೊತ್ತಿಲ್ಲ. ಸದರಿ ಪ್ರಕರಣವು ವಾದಿಯ ನಿರ್ಲಕ್ಷತನದಿಂದ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಾನು ಪಕ್ಷಗಾರಳಾಗಿದ್ದು ವಕೀಲರ ಮೂಲಕ ಹಾಜರಾಗಿ ಅವರಿಗೆ ಮಾಹಿತಿಯನ್ನು ನೀಡಿ ಈಗ ಮಾಹಿತಿ ಇಲ್ಲಾ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

8) ಸದರಿ ಪ್ರಕರಣಗಳನ್ನು ನಾನು, 2 ನೇ ವಾದಿ ಮತ್ತು ನನ್ನ ತಂದೆ ತಾಯಿ ಮತ್ತು ಸಹೋದರರು ಸೇರಿ 6 ನೇ ಪ್ರತಿವಾದಿಗೆ ತೊಂದರೆ ಮತ್ತು ಲುಕ್ಷಾನು ಮಾಡುವ ಉದ್ದೇಶದಿಂದ ಸುಳ್ಳು ಮಾಹಿತಿಯ ಮೇರೆಗೆ ದಾವೆಯನ್ನು ಸಲ್ಲಿಸುತ್ತಾ ಬಂದಿರುತ್ತೇವೆ ಅಂದರೆ ಸರಿಯಲ್ಲ.

9) ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ನವಲಗುಂದ ರವರ ಮೇಲ್ಮನವಿ ಆದೇಶದ ಮೇರೆಗೆ ಮಾನ್ಯ ಇದೇ ನ್ಯಾಯಾಲಯದಲ್ಲಿ ದರಕಾಸ್ತು ಪ್ರಕರಣ ಸಂಖ್ಯೆ 03/2021 ನ್ನು ನನ್ನ ತಾಯಿಯ ವಿರುದ್ಧ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದರಕಾಸ್ತು ಪ್ರಕರಣವು ನನ್ನ ತಾಯಿಯು ಸಂಚಕಾರ ಪತ್ರದ ಬಾಕಿ ಮೊತ್ತವನ್ನು ಪಡೆದು ದಾವಾ ಆಸ್ತಿಯ ಸಂಬಂದ ಖರೀದಿ ಪತ್ರವನ್ನು ಮಾಡಿ ಕೊಡಬೇಕಾಗಿರುತ್ತದ ಎಂದು ಹೂಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ವಕೀಲರನ್ನು ನೇಮಕ ಮಾಡಿ ಖರೀದಿ ಪತ್ರವನ್ನು ಮಾಡಿಕೊಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಪತ್ರವಾದ ನಂತರದಲ್ಲಿ ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ದಾವಾ ಆಸ್ತಿಯ ಕಬ್ಜಾವನ್ನು 6 ನೇ ಪ್ರತಿವಾದಿಗೆ ಹಸ್ತಾಂತರ ಮಾಡಿ ಕಬ್ಜಾ ರಶೀದಿಯನ್ನು ಸಲ್ಲಿಸಿದ್ದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

10) ನ್ಯಾಯಾಲಯದ ಆದೇಶದ ಮೇರೆಗೆ ಆದ ಖರೀದಿ ಪತ್ರದ ಆದಾರದ ಮೇಲೆ ಕಂದಾಯ ದಾಖಲೆಗಳಲ್ಲಿ ಎಂ.ಆರ್.ಸಂಖ್ಯೆ ಹೆಚ್-32/2021-22 ರಂತೆ 6 ನೇ ಪ್ರತಿವಾದಿಯ ಹೆಸರು ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಕಾನೂನಾತ್ಮಕವಾಗಿ 6 ನೇ ಪ್ರತಿವಾದಿಯ ಮಾಲ್ಕಿ ಕಬ್ಜಾ ವಹಿವಾಟಿನಲ್ಲಿರುತ್ತದೆ ಎಂದರೆ ಸಾಕ್ಷಿಯು ಆಸ್ತಿಯು 6 ನೇ ಪ್ರತಿವಾದಿಯ ಕಬ್ಜೆಯಲ್ಲಿದೆ ಎಂದು ನುಡಿಯುತ್ತಾರೆ.

11) ದರಕಾಸ್ತು ಅರ್ಜಿ 03/2021 ರಲ್ಲಿ ಮಾನ್ಯ ನ್ಯಾಯಾಲಯವು ಆದೇಶವನ್ನು ಸಂಪೂರ್ಣವಾಗಿ ಮಾನ್ಯವಾದ ಕಾರಣ ಅದನ್ನು ದಿನಾಂಕ 21-03-2024 ರಂದು ಇತ್ಯರ್ಥಗೊಳಿಸಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವಾ ಆಸ್ತಿಯ ಮೇಲೆ ವಾದಿಯರಿಗೆ ಹಾಗೂ 1 ರಿಂದ 5 ನೇ ಪ್ರತಿವಾದಿಗೆ ಯಾವುದೇ ಹಕ್ಕು ಹಾಗೂ ಹಿತಾಸಕ್ತಿ ಇರುವುದಿಲ್ಲ ಅಂದರೆ ಸರಿಯಲ್ಲ.

12) ದಾವಾ ಆಸ್ತಿಯ ಸಂಬಂದ ಚಾಲ್ತಿಯಲ್ಲಿದ್ದ ಎಲ್ಲಾ ಪ್ರಕರಣಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದ್ದರು ಸಹ ನನಗೆ ಗೊತ್ತಿಲ್ಲ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

13) ದಾವಾ ಆಸ್ತಿಯು ನನ್ನ ತಾಯಿಗೆ ಈ ಹಿಂದೆ ಸ್ತ್ರಿಧನವಾಗಿ ಬಂದ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯು ಈ ಹಿಂದೆ ನನ್ನ ತಾಯಿಯ ಸ್ವಯಾರ್ಜಿತ ಮತ್ತು ಪ್ರತ್ಯಕ ಆಸ್ತಿ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮಗೂ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯು ನನ್ನ ಹಾಗೂ ನನ್ನ ಕುಟುಂಬದ ಜಂಟಿ ಕಬ್ಜಾ

ವಹಿವಾಟಿನಲ್ಲಿ ಇದ್ದು ಅದು ನಮ್ಮ ಏಕತ್ರ ಕುಟುಂಬದ ಆಸ್ತಿ ಇದೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 4 ರಿಂದ 11 ನೇ ಕಂಡಿಕೆಯಲ್ಲಿ ಬರೆದ ವಿಷಯಗಳು ಸುಳ್ಳು ಮಾಹಿತಿಯ ಮೇರೆಗೆ ನಮೂದು ಮಾಡಿರುತ್ತೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲದೇ ಇದ್ದರು ಸಹ ಸುಳ್ಳು ಮಾಹಿತಿಯ ಮೇರೆಗೆ, ದಾವೆಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

<u>**1** ರಿಂದ **5** ನೇ ಪ್ರತಿವಾದಿಯರು ಏಕತರ್ಫಿಯಾಗಿದ್ದು ಪಾಟೀಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು.</u>

<u>ಮರು ವಿಚಾರಣೆಃ ಇಲ್ಲಾ.</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**